**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 1127/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 3**
**ದಿನಾಂಕಃ** 05.08.2026 **ಸಿಡಬ್ಲ್ಯೂ 3**

| | |
|---|---|
| ಹೆಸರು | ಆನಂದಕುಮಾರ |
| ತಂದೆಯ ಹೆಸರು | ರಾಮಚಂದ್ರಪ್ಪ |
| ವಯಸ್ಸು | 53 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ03.08.2023 ರಂದು ಚಾಸಾ.1 ರವರ ಅಂಗಡಿ ಇದ್ದು ಅಲ್ಲಿ ನಾನು ಬೆಳಗ್ಗೆ 10.30 ಗಂಟೆ ಸಮಯದಲ್ಲಿ ಚಹಾ ಕುಡಿಯಲು ಹೋದಾಗ ಚಾಸಾ.1 ಮತ್ತು ಅವರ ಗಂಡನ ಮಧ್ಯ ಜಗಳ ನಡೆದಿತ್ತು. ಪೋಲೀಸರು ಅಲ್ಲಿಗೆ ಬಂದಿರುತ್ತಾರೆ. ಅಲ್ಲಿ ಪೋಲೀಸರು ನನ್ನ ಮತ್ತು ಚಾಸಾ.2 ರವರ ಸಮಕ್ಷಮ ಬೆಳಗ್ಗೆ 10 ರಿಂದ 11 ಗಂಟೆವರೆಗೆ ಪಂಚನಾಮೆ ಮಾಡಿ ಫೋಟೋ ತೆಗೆದಿರುತ್ತಾರೆ ಮತ್ತು ಅಲ್ಲಿ ಮರದ ತುಂಡನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ.2 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ.2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ಕಾಲಕ್ಕೆ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ.3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿತರ ಪರ ಶ್ರೀಮತಿ ಕೆ ಎಸ್ ಎಸ್ ವಕೀಲರಿಂದಃ

ಚಾಸಾ.1 ರವರ ಪರಿಚಯ ಇರುತ್ತದೆ. ನನ್ನನ್ನು ಮತ್ತು ಚಾಸಾ.2 ರವರನ್ನು ಚಾಸಾ.1 ರವರೇ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಪೋಲೀಸರು ಪಂಚನಾಮೆಗೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಗುನ್ಹಾ ಸ್ಥಳದ ಪಕ್ಕದಲ್ಲಿ ರಾ.ಹೆ. ಇದೆ ಎಂದರೆ ಸರಿ. ಅಂಗಡಿಯ ಪಕ್ಕ ಸಾಕಷ್ಟು ಮನೆಗಳು ಬಸ್ ನಿಲ್ದಾಣ ಇದೆ ಎಂದರೆ ಸರಿ. ಸಹಿ ಮಾಡು ಅಂತ ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಗುನ್ಹಾ ಸ್ಥಳದ ಚೆಕ್ ಬಂದಿ ಹೇಳಲು ಬರುವುದಿಲ್ಲ. ಆ ದಿನ ಜಗಳವಾದ ಬಗ್ಗೆ ಮತ್ತು ಪೋಲೀಸರು ಅಲ್ಲಿಗೆ ಬಂದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.ಗಳ ಮೇಲೆ ನನ್ನ ಸಹಿ ಮಾಡಿರುವುದಿಲ್ಲ. ನಾನು ಮತ್ತು ಚಾಸಾ.2 ರವರು ಚಾಸಾ.1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಗಲಾಟೆ ಆಗಿರುವುದಿಲ್ಲ ನಾನು

ಠಾಣೆಯಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾವು ನಿಪಿ.1 ರಿಂದ 3 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ.